**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ. 2230–2022.**

ಪಿರ್ಯಾದುದಾರರುಃ– ದಿ ಭಟ್ಕಳ ಎಗ್ರಿಕಲ್ಚರ್ ಎಂಡ್ ರೂರಲ್ ಡೆವಲಪ್ ಮೆಂಟ್
ಬ್ಯಾಂಕ್, ಲಿ., ಪ್ರತಿನಿಧಿಸುವವರು ಮ್ಯಾನೇಜರ್ ,
ಭಟ್ಕಳ , ಶಾಖೆ– ಹೊನ್ನಾವರ,
ತಾಲ್ಲೂಕುಃ– ಹೊನ್ನಾವರ, ಉತ್ತರ ಕನ್ನಡ.

**– ವಿರುದ್ಧ –**

ಆರೋಪಿಯ ಹೆಸರುಃ– ಗೌರಿ ಕೋಂ ಗಜಾನನ ಅಂಬಿಗ,
ಸಾಕೀನಃ– ತಗ್ಗಡಗಿ, ಸುರಕಟ್ಟಾ, ಪೋಸ್ಟ್ಃ– ಮುಗ್ವಾ,
ತಾಲ್ಲೂಕುಃ– ಹೊನ್ನಾವರ , ಉತ್ತರ ಕನ್ನಡ.

********

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರನ್ವಯ ಆರೋಪಿಯ ಹೇಳಿಕೆ.**

ಪ್ರಶ್ನೆಃ 1. ನೀವು ಪಿರ್ಯಾದುದಾರರ ಪರವಾಗಿ ಫ್ರಾಸಾ–1 ರವರ ಹೇಳಿಕೆಯನ್ನು ನೀವು ಕೇಳಿದ್ದೀರಾ?

ಆರೋಪಿಯ ಉತ್ತರಃ– ಕೇಳಿದ್ದೇನೆ.

ಪ್ರಶ್ನೆಃ 2. ಫ್ರಾಸಾ–1 ರವರು ತಮ್ಮ ಸಾಕ್ಷ್ಯದಲ್ಲಿ , ಆರೋಪಿಯಾದ ನೀವು, ಪಿರ್ಯಾದಿಯ ಬ್ಯಾಂಕ್ ನಿಂದ ಸಾಲವನ್ನು ಪಡೆದಿದ್ದು, ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿ ಸದರಿ ಸಾಲವನ್ನು ಮರುಪಾವತಿಸುವುದಾಗಿ ಒಪ್ಪಿಕೊಂಡಿದ್ದು, ಆ ಪ್ರಕಾರ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ– ಸುಳ್ಳು .

ಪ್ರಶ್ನೆಃ 3. ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ , ಸದರಿ ಸಾಲದ ಹಣದ ಮರುಪಾವತಿಗಾಗಿ ನಿಮ್ಮ ಬ್ಯಾಂಕ್ ಖಾತೆಯುಳ್ಳ, ಕರ್ನಾಟಕ ಬ್ಯಾಂಕ್ ಲಿ., ಹೊನ್ನಾವರ ಶಾಖೆಯ ಚೆಕ್ ನಂ. 487386, ನೇದನ್ನು ದಿನಾಂಕಃ 12–07–2022 ರಂದು ರೂ. 67,170/– (ರೂ. ಅರವತ್ತೇಳು ಸಾವಿರದ ಒಂದು ನೂರಾ ಎಪ್ಪತ್ತು ರೂಪಾಯಿ ಮಾತ್ರ) ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಸದರಿ ಚೆಕ್ ಬ್ಯಾಂಕ್ ಗೆ ಹಾಕಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಪಿರ್ಯಾದಿಯ ಹೆಸರಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ– ಸುಳ್ಳು .

ಪ್ರಶ್ನೆಃ 4. ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ , ಪಿರ್ಯಾದಿಯವರು ಅವರ ಬ್ಯಾಂಕ್ ಖಾತೆಯಿರುವ ಕೆನರಾ ಜಿಲ್ಲಾ ಕೇಂದ್ರ ಕೋ–ಆಪ್ ಬ್ಯಾಂಕ್ ಲಿ., ಶಿರಸಿ, (ಕೆ.ಡಿ.ಸಿ.ಸಿ.) ಹೊನ್ನಾವರ ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಕೆ.ಡಿ.ಸಿ.ಸಿ. ಬ್ಯಾಂಕ್ ನವರು Kindly Contact Drawer/Drawee Bank and Pleasen ಎಂದು ತಿಳಿಸಿ, ಸದರಿ ಚೆಕ್ ನ್ನು ದಿನಾಂಕಃ 19–07–2022 ರಂದು ಒಂದು ಮೆಮೋದೊಂದಿಗೆ ವಾಪಸ್ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ– ಸುಳ್ಳು .

ಪ್ರಶ್ನೆಃ 5. ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ , ಪಿರ್ಯಾದಿಯವರು ನಿಮಗೆ ಅವರ ವಕೀಲರ ಮೂಲಕ ದಿನಾಂಕಃ 28–07–2022 ರಂದು ಒಂದು ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕಃ 02–08–2022 ರಂದು ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ– ಸುಳ್ಳು .

ಪ್ರಶ್ನೆ 6 : ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯೇ?

ಆರೋಪಿಯ ಉತ್ತರ : ಇಲ್ಲ.

ಪ್ರಶ್ನೆ 7: ಸದ್ರಿ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೇ?

ಆರೋಪಿಯ ಉತ್ತರ : ಇಲ್ಲ.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ.

**ದಿನಾಂಕಃ 25-07-2023.**

**(ಈರಣ್ಣ ಹುಣಶಿಕಟ್ಟಿ).,**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

ಆರೋಪಿಯ ಸಹಿ ,

ಸಹಿ ಇದೆ.

*************